**<u>ಮುಖ್ಯ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಕೊಪ್ಪಳ</u>**

**ಸಿ.ಸಿ. ಸಂಖ್ಯೆಃ 225/2020**

**ದಿನಾಂಕಃ 20-12-2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣೀಕರಿಸಲಾಯಿತು.**

| | |
|---|---|
| ಸಿಡಬ್ಲೂ- | 07 |
| ಪಿಡಬ್ಲೂ- | 07 |

**<u>ಪಾಟೀ ಸವಾಲು ಃ ಆರೋಪಿ ಪರ ಶ್ರೀ ಎಸ್.ಎ. ವಕೀಲರಿಂದಃ</u>**

ನಾನು ಈ ಪ್ರಕರಣ ದಾಖಲಿಸುವಾ ಮುಖ್ಯ ಪೇದೆಯಾಗಿದ್ದೆ. ನನಗೆ ಸಿ.ಆರ್.ಪಿ.ಸಿ ಮತ್ತು ಐ.ಪಿ.ಸಿ. ಪೋಲೀಸ್ ಮೆನುವಲ್ ನನ್ನ ಅವಶ್ಯಕತೆಗೆ ತಕ್ಕಂತೆ ಗೊತ್ತಿರುತ್ತದೆ. ಈ ಗುನ್ನಾ ನಂ. 4/2020 ನ್ನು 420, 465, 468 ಐಪಿಸಿ ರ ಅಡಿ ದಾಖಲಿಸಿದ್ದೇನೆ. ಈ ಪ್ರಕರಣ ದಾಖಲಿಸುವ ಅಧಿಕಾರ ನಮಗೆ ಇರುತ್ತದೆ. ಈ ಸೆಕ್ಷನ್ ಗ ಅಡಿಯಲಿ ಪಿಎಸ್ ಐ ಮಾತ್ರ ಪ್ರಕರಣ ದಾಖಲಿಸಲು ಅರ್ಹನಿರುತ್ತಾನೆ ಎನ್ನುವುದು ಸರಿಯಲ್ಲ. ಎಸ್ ಹೆಚ್ ಓ ಆಗಿ ಕೇಲಸ ನಿರ್ವಹಿಸುವ ಹೆಚ್ ಸಿ ಸಹ 420, 465, 468 ಐಪಿಸಿ ರಡಿಯಲ್ಲಿ ಪ್ರಕರಣ ದಾಖಲಿಸಬಹುದು.

2. ಫಿರ್ಯಾದಿ ಕೊಡಲು ಆರ್ ಐ ಮತ್ತು ತಹಶೀಲ್ದಾರ ಬಂದಿದ್ದರು. ಫಿರ್ಯಾದಿ ಕೊಡಲು ಸುಮಾರು 1 ಗಂಟೆಗೆ ಬಂದಿದ್ದರು. ಅರ್ದ ಗಂಟೆಯಲ್ಲಿ ಫಿರ್ಯಾದಿ ಪಡೆದೆ. ಅದರೊಂದಿಗೆ ಅವರು ಸಂಬಂದಪಟ್ಟ ದಾಖಲೆ ಕೊಟ್ಟಿದ್ದರು. ದೃಡಿಕೃತ ಪಹಣಿಗಳು, ತಿದ್ದಿರುವ ಪಹಣಿ ಪತ್ರಿಕೆಗಳು, ತಹಶೀಲ್ದಾರ ಕೊಪ್ಪಳ ಇವರ ಆದೇಶದ ಪ್ರತಿ, ವಕೀಲರು ಕೊಟ್ಟ ನೊಟಿಸನ ಪ್ರತಿ, ವಕೀಲರು ಕೊಟ್ಟ ನೊಟಿಸ್ಸಿಗೆ ತಹಶೀಲ್ದಾರವರು ಕೊಟ್ಟ ಪ್ರತ್ಯುತ್ತರ ಪ್ರತಿ, ಅವುಗಳೆಲ್ಲಾ ಜರಾಕ್ಸ ಪ್ರತಿ ಇದ್ದವು.

3. ನನ್ನ ನಂತರ ಎಸ್ ಹೆಚ್ ಓ ಕರ್ತವ್ಯದಲ್ಲಿ ಹೆಚ್ ಸಿ ರಾಜಾಸಾಬ ಇದ್ದರು. ನನಗೆ ಆರ್ ಐ ಆಥವಾ ತಹಶೀಲ್ದಾರ ಯಾವುದೇ ಫಿರ್ಯಾದಿ ಕೊಟ್ಟಿಲ್ಲ ಎಂದರೆ ಸರಿಯಲ್ಲ ಮತ್ತು ನಾನು ಸುಳ್ಳು ಹೇಳುತ್ತಿದೇನೆ ಎಂದರೆ ಸರಿಯಲ್ಲ.

**<u>ಮರು ವಿಚಾರಣೆಃ ಇಲ್ಲ</u>**

**<u>(ಸಾಕ್ಷಿಯು ನುಡಿದಂತೆ ನನ್ನ ಉಕ್ತ ಲೇಖನದಂತೆ ಬಹಿರಂಗ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ಬೆರಳಚ್ಚು ಮಾಡಿಸಲಾಯಿತು)</u>**

ಓ.ಹೇ.ಕೇ. ಸರಿ ಇದೆ.
ಸಹಿ/-
**ಸಿ.ಜೆ.ಎಮ್., ಕೊಪ್ಪಳ.**